

## ಅಪರೂಪದ ಪನ್ನೀರು ದಾನಿ

ಮದುವೆ, ಉಪನಯನ ಮುಂತಾದ ಸಮಾರಂಭಗಳಲ್ಲಿ ಪನ್ನೀರು ಚುಮುಕಿಸಿ ಆಮಂತ್ರಕರನ್ನು ಎದುರುಗೊಳ್ಳುವುದು ಸಂಪ್ರದಾಯ. ಈಗ ಅದಕ್ಕಾಗಿಯೇ ಒಂದು ಪುಟ್ಟ ಮಷಿನ್ ಮುಖ್ಯದ್ವಾರದ ಮುಂದೆ ನಿಂತಿರುತ್ತದೆ. ಹಾಗಾಗಿ, ಪನ್ನೀರು ದಾನಿಗಳ ಬಳಕೆಯೇ ಕಡಿಮೆ ಆಗಿದೆ. ನಮ್ಮ ಅತ್ತೆ ಅರಸೀಕೆರೆಯ ಶ್ರೀಲತಾ ಬಾಬು ಅವರ ಮನೆಯ ಈ ಬೆಳ್ಳಿ ಪನ್ನೀರುದಾನಿ ವಿಶೇಷ ವಿನ್ಯಾಸದಿಂದ ಕೂಡಿದ್ದು ತಂಬಾ ಆಕರ್ಷಕವಾಗಿದೆ. ತಮ್ಮ ಮನೆಯ ವಿಶೇಷ ಸಮಾರಂಭಗಳಲ್ಲಿ ಅಣಿತಟ್ಟೆಯೊಂದಿಗೆ ಇದನ್ನೂ ಅಲಂಕರಿಸುತ್ತಾರೆ.

■ ಸ್ಮಿತಾ ಎಸ್.ಎಂ., ಶಿವಮೊಗ್ಗ

## ಎಷ್ಟೊಂದು ಗುಂಡುಗಳು!

ಚಿತ್ರದಲ್ಲಿ ಕಾಣಿಸುತ್ತಿರುವ ಕಲ್ಲಿನ ಗುಂಡುಗಳು ರಾಯಚೂರಿನ ಬಸವೇಶ್ವರ ವೃತ್ತ ಹತ್ತಿರ ಇರುವ ಐತಿಹಾಸಿಕ ಕೋಟೆಯ ಬುರ್ಜ್‌ನ ಸ್ವಚ್ಛತಾ ಕಾರ್ಯ ಕೈಗೊಂಡಾಗ ಸಿಕ್ಕ ಗುಂಡುಗಳಿವು. ಈ ಕಲ್ಲಿನ ಗುಂಡುಗಳು ಸಿಕ್ಕ ಕೆಲವೇ ದಿನಗಳ ಹಿಂದೆ ಒಂದು ತೋಪು ಅಂದರೆ ಕಲ್ಲಿನ ಗುಂಡುಗಳನ್ನು ಇಟ್ಟು ಸಿಡಿಸುವ ಸಾಧನ ಪತ್ತೆಯಾಗಿತ್ತು.

■ ಈರಣ್ಣ ಬೆಂಗಾಲಿ, ರಾಯಚೂರು





## ಆನೆ ಅಲ್ಲಲ್ಲ; ಇದು ಬಂಡೆ

ಮೊದಲ ನೋಟಕ್ಕೆ ಆನೆಯೊಂದು ದೂರದಲ್ಲಿ ಮಲಗಿದಂತೆ ಕಾಣುತ್ತದೆ. ವಾಸ್ತವಾಗಿ ನೋಡುವುದಾದರೆ ಇದು ಆನೆಯಲ್ಲ ಬಂಡೆ. ಥೇಟ್ ಆನೆಯಂತೆಯೇ ಕಾಣುವ ಈ ಬಂಡೆಯು ಇರುವುದು ಚಿತ್ರದುರ್ಗದ ಕಲ್ಲಿನ ಕೋಟೆಯಲ್ಲಿ. 3ನೇ ಹಂತದ (ಬಾಗಿಲಿನ) ನಂತರ ಸಿಗುವ ಗಣಪತಿ ಮಂದಿರದ ಹಿಂಭಾಗದ ಕೋಟೆ ಹತ್ತುವ ಮಾರ್ಗದಲ್ಲಿ ನಿಜಕ್ಕೂ ಪ್ರಕೃತಿ ವೈಶಿಷ್ಟ್ಯವನ್ನು ಮೆಚ್ಚಲೇ ಬೇಕು. ಈ ಬಂಡೆಯು ಆನೆಯ ದೇಹ, ಕಣ್ಣು ಹಾಗೂ ಸೊಂಡಿಲಂತೆಯೇ ಕಾಣುತ್ತದೆ. ಇಲ್ಲಿಗೆ ಬರುವ ಬಹುತೇಕ ಪ್ರವಾಸಿಗರ ಇದನ್ನು ಆನೆ ಬಂಡೆ ಎಂದೇ ಕರೆಯುತ್ತಾರೆ. ಅದರ ಎದುರು ನಿಂತು ಸೆಲ್ಫಿ ಕ್ಲಿಕ್ಕಿಸಿಕೊಂಡು ಮುಂದೆ ಸಾಗುತ್ತಾರೆ. ವಿಶೇಷವೆಂದರೆ, 17ನೇ ಶತಮಾನದ ಶಾಸನವೊಂದರಲ್ಲಿಯೂ ಈ ಆನೆ ಬಂಡೆಯ ಬಗ್ಗೆ ಉಲ್ಲೇಖಿಸಲಾಗಿದೆ.

■ ಡಾ. ಕೆ.ವಿ. ಸಂತೋಷ್, ಹೊಳಲ್ಕೆರೆ